# CONTRIBUTION OF WOMEN OF BENGALURU AND RAMANAGARA DISTRICTS FOR FREEDOM MOVEMENT

- **Dr.H.Krishnegowda**

## ಸ್ವಾತಂತ್ರ್ಯ ಚಳುವಳಿಗೆ ಬೆಂಗಳೂರು ಹಾಗೂ ರಾಮನಗರ ಜಿಲ್ಲೆಯ ಮಹಿಳೆಯರ ಕೊಡುಗೆ

- *ಡಾ.ಎಚ್.ಕೃಷ್ಣೇಗೌಡ*
**ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ,**
**ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮದ್ದೂರು.**

ಭಾರತೀಯ ಸಮುದಾಯವು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯತೆ ಪ್ರದರ್ಶಿಸುವ ಮೂಲಕ ತನ್ನದಲ್ಲದ ಪ್ರಭುತ್ವ ವ್ಯವಸ್ಥೆಯನ್ನು ಧಿಕ್ಕರಿಸಿ ನಿಂತು ತನ್ನೊಳಗಿನ ಎಲ್ಲಾ ಅಸ್ತಿತ್ವವಾದಿ ಚಿಂತನೆಗಳಿಗೆ ಮೂರ್ತರೂಪ ಕೊಟ್ಟು ತನ್ನೆಲ್ಲ ಆದರ್ಶಗಳನ್ನು, ಮೌಲ್ಯಗಳನ್ನು ಪ್ರಯೋಗಕ್ಕೆ ಒಡ್ಡಿಕೊಂಡು ಯಶಸ್ಸು ಕಂಡ ಮಹತ್ವದ ಸಂದರ್ಭವೇ ಸ್ವಾತಂತ್ರ್ಯ ಚಳುವಳಿ ಎನ್ನಬಹುದು. ಇಮ್ಯಾನ್ಯುಯಲ್ ಕ್ಯಾಂಟನ್ ಪ್ರಕಾರ ಸ್ವಾತಂತ್ರ್ಯವೆಮ್ದರೆ ಇನ್ನೊಬ್ಬನ ಚಿತ್ತದ ಒತ್ತಾಯಕ್ಕೆ ಸಿಲುಕದೆ ಸಾಮಾನ್ಯವಾಗಿ ತನ್ನ ನಿತ್ಯ ವ್ಯವಹಾರಗಳನ್ನು ಹತ್ತು ಸಮಸ್ತರ ಸಾಮಾನ್ಯ ಸ್ವಾತಂತ್ರ್ಯಾನುಭವಕ್ಕೆ ಅಡ್ಡಿಯಾಗದ ರೀತಿಯಲ್ಲಿ ನಿರಾಂತಕವಾಗಿ ನಡೆಸಿಕೊಂಡು ಹೋಗುವುದು. ಭಾರತದಲ್ಲಿ ಸಾಮ್ರಾಜ್ಯಶಾಹಿತ್ವ ಸ್ಥಾಪಿಸಿದ ಬ್ರಿಟಿಷರು ಭಾರತೀಯರನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ಶೋಷಣೆಗೊಳಪಡಿಸಿ ಸ್ವಾತಂತ್ರ್ಯಾಪಹರಣ ಮಾಡಿದರು. ನಂತರ ತಡವಾಗಿ ಎಚ್ಚೆತ್ತ ಭಾರತೀಯರು ಸಂಘಟಿತರಾಗಿ ದಾಸ್ಯದಿಂದ ಮುಕ್ತಿ ಪಡೆಯಲು ಹೋರಾಟ ಪ್ರಾರಂಭಿಸಿದರು. ಭಾರತೀಯ ಸಮಾಜವು ಸತ್ಯ, ಅಹಿಂಸೆ, ಅಪರಿಗ್ರಹ, ಆಸ್ತೇಯಾ ಇತ್ಯಾದಿ ರೂಪಗಳಲ್ಲಿ ಪ್ರಕಟಿಸಿದ್ದು, ಅದು ಗಾಂಧೀವಾದದೊಂದಿಗೆ ದೇಶದ ಧೀಶಕ್ತಿಯಾಗಿ ಹೊರಹೊಮ್ಮಿತು. ರಾಷ್ಟ್ರಮಟ್ಟದ ನಾಯಕರಿಂದ ಪ್ರಭಾವಿತರಾಗಿ ಅನೇಕ ಮಹನೀಯರು ಗ್ರಾಮಾಂತರ ಪ್ರದೇಶಗಳಲ್ಲಿಯೂ ಚಳುವಳಿಗೆ ತಮ್ಮನ್ನು ಸಮರ್ಪಿಸಿಕೊಂಡರು. ಪುರುಷರಷ್ಟೇ ಸರಿಸಮಾನವಾಗಿ ಮಹಿಳೆಯರು ಈ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಚಳುವಳಿಗೆ ಬೆಂಗಳೂರು ಹಾಗೂ ರಾಮನಗರ ಜಿಲ್ಲೆಗಳ ಮಹಿಳೆಯರ ಕೊಡುಗೆಯು ಅಪಾರವಾದುದ್ದಾಗಿದೆ. ಇಲ್ಲಿನ ಮಹಿಳೆಯರು ತಮ್ಮ ಸಂಘಟನೆ ಹೋರಾಟದ ಮುಖಾಂತರ ರಾಷ್ಟ್ರಮಟ್ಟದ ನಾಯಕರ ಗಮನ ಸೆಳೆದಿದ್ದಾರೆ. ಇದಕ್ಕೆ ಅನೇಕ ನಿದರ್ಶನಗಳಿವೆ. ಇಲ್ಲಿ ಮಹಿಳೆಯರ ನೇತೃತ್ವದ ಅನೇಕ ಘಟನಾವಳಿಗಳು ಜರುಗಿವೆ. ಈ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸಿ ಅಜ್ಞಾತವಾಗಿಯೇ ಉಳಿದು ಬೆಳಕಿಗೆ ಬಾರದೆ ಇರುವ ಇಲ್ಲಿನ ಪ್ರಮುಖ ಮಹಿಳೆಯರು ಹಾಗೂ ಅವರ ಹೋರಾಟವನ್ನು ನನ್ನ ಪ್ರಬಂಧ ಒಳಗೊಂಡಿದೆ. ಅವರುಗಳೆಂದರೆ ಕನಕಪುರದ ಗೌರಮ್ಮ,

ಚನ್ನಪಟ್ಟಣ ತಲ್ಲೂಕಿನ ಬೈರಾಪಟ್ಟಣದ ಕಮಲಮ್ಮ, ಅಕ್ಕೂರಿನ ತಾಯಮ್ಮ, ಚನ್ನಪಟ್ಟಣದ ಸರಸ್ವತಮ್ಮ, ಬೆಂಗಳೂರಿನ ಜಯಮ್ಮ, ಕಾಮಾಕ್ಷಮ್ಮ, ಭಾಗೀರಥಮ್ಮ, ವಂದೇಮಾತರಂ ಸುನಂದಮ್ಮ, ಕುಂತಳಾ ಸೇತುರಾವ್, ಯಶೋಧರ ದಾಸಪ್ಪ (ನೆಲೆ ಮೈಸೂರಾಗಿದ್ದರೂ ಕಾರ್ಯಕ್ಷೇತ್ರ ಬೆಂಗಳೂರು) ಸುಬ್ಬಮ್ಮ ಜೋಯಿಸ, ಮಹಾದೇವಿ, ಲಕ್ಷ್ಮೀದೇವಿ, ಸುಶೀಲಮ್ಮ, ಪಾಪಮ್ಮ, ದೇವಯಾನಿಯಮ್ಮ ಮುಂತಾದವರು.

**ಬೆಂಗಳೂರು ಹಾಗೂ ರಾಮನಗರ ಜಿಲ್ಲೆಯ ಪ್ರಮುಖ ಮಹಿಳಾ ಹೋರಾಟಗಾರರು:**

**ಯಶೋಧರ ದಾಸಪ್ಪ**

ಬೆಂಗಳೂರು ಜಿಲ್ಲೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಪ್ರಮುಖ ಮಹಿಳೆಯರಲ್ಲಿ ಅಗ್ರಗಣ್ಯರೆಮ್ದರೆ ಯಶೋಧರದಾಸಪ್ಪ. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ತರವಾದ ಪಾತ್ರವಹಿಸಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಕಲ್ಲುದೇವರಹಳ್ಳಿ, ಕೆ.ಹೆಚ್.ರಾಮಯ್ಯ ಮತ್ತು ರೇವಮ್ಮ ದಂಪತಿಗಳ ಮಗಳಾಗಿ ಹುಟ್ಟಿ, ಮನೆಯಲ್ಲಿಯೇ ಸಂಸ್ಕಾರವಂತಳಾಗಿ ಬೆಳೆದು, ಬೆಂಗಳುರಿನ ಲಂಡನ್ ಮಿಷನ್ ಸ್ಕೂಲಿನಲ್ಲಿ ಶಿಕ್ಷಣಪಡೆದರು. 1926ರಲ್ಲಿ ಅಂದಿನ ಪ್ರಮುಖ ನಾಯಕರಾಗಿದ್ದ ಹೆಚ್.ಸಿ.ದಾಸಪ್ಪನವರೊಂದಿಗೆ ವಿವಾಹವಾದರು. 1929ರ ಶಾರದ ಆಕ್ಟ್ ಪ್ರತಿಪಾದಿಸಿದವರಲ್ಲಿ ಇವರು ಒಬ್ಬರು. ಸಮಾಜ ಸುಧಾರಣೆಗೆ ಕೈ ಜೋಡಿಸಿದ ಇವರು ಮಹಿಳಾ ಸಮಾಜ, ಭಗಿನಿ ಸಮಾಜ, ವನಿತಾ ಸಮಾಜಗಳ ಜೊತೆ ಸೇರಿ ದುಡಿದರು. 1938ರಲ್ಲಿ ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿ ಆಯ್ಕೆಗೊಂಡ ಪ್ರಥಮ ಮಹಿಳಾ ಸದಸ್ಯೆ ಎಂಬ ಖ್ಯಾತಿ ಇವರದಾಗಿದೆ. ನಿಷ್ಟಾವಂತ ಕಾಂಗ್ರೆಸಿರಗಾಇದ್ದ ಇವರು ಪತಿ ದಾಸಪ್ಪ ಪ್ರಜಾ ಸಂಯುಕ್ತ ಪಕ್ಷದ ಅಭ್ಯರ್ಥಿಯಾಗಿದ್ದರೆ, ಕಾಂಗ್ರೆಸ್‌ನಿಂದ ಲಿಂಗಯ್ಯನವರು ಸ್ಪರ್ಧಿಸಿದ್ದರು. ಯಶೋಧರ ಗಂಡನೆಂಬ ಮಮಕಾರ ಮರೆತು, ಪಕ್ಷ ನಿಷ್ಠೆ ಮೆರೆದು ಕಾಂಗ್ರೆಸ್ ಪಕ್ಷದ ಲಿಂಗಯ್ಯನವರಿಗೆ ಮತಹಾಕಿದರು. ಇಮ್ತಹ ವಿಚಾರ ರಾಷ್ಟ್ರೀಯ ಚಳುವಳಿಯ ಅದ್ಭುತಗಳಲ್ಲಿ ಒಂದು ಎಂದರೆ ಅತಿಶಯೋಕ್ತಿಯೇನಲ್ಲ. ದಂಪತಿಗಳಿಬ್ಬರೂ ವಾರ್ದಾ ಸೇವಾಗ್ರಾಮಕ್ಕೆ ತೆರಳಿ ಹಲವು ತಿಂಗಳು ನೆಲೆಸಿದರು. ಅಸ್ಪೃಶ್ಯತಾ ನಿವಾರಣೆಗೆ ಮುಂದಾಗಿದ್ದ ಯಶೋಧರ ದಲಿತ ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡು ಸಾಕಿ ಆ ಮಗುವಿಗೆ ಗಾಂಧೀಜಿ 'ಪ್ರಭಾ' ಎಂದು ನಾಮಕರಣ ಮಾಡಿದರು. ಶಿವಪುರದಲ್ಲಿ ಧ್ವಜಾರೋಹಣ ಕೆಲಸವನ್ನು ಹೆಂಗಸರೇ ಮಾಡುತ್ತೇವೆ ಬಿಡಿ ಎಂದು ಟಿ.ಸುನಂದಮ್ಮನವರು ಗುಡುಗಿದಾಗ, ಇದನ್ನು ಸಮರ್ಥಿಸಿ ಯಶೋಧರಾ ಸಹಾ ಮುಂದಾಗಿ, ಧ್ವಜ ಸ್ತಂಭದ ಸುತ್ತ ನಿಂತು ಪ್ರಾಣದ ಹಂಗು ತೊರೆದು ಕಾದರು. ಸಭೆ ಸಮಾರಂಭಗಳಲ್ಲಿ ಪುರಾಣದ ಉಲ್ಲೇಖಗಳನ್ನು ಹೇಳಿ ಜನರನ್ನು ಹುರುದುಂಬಿಸುತ್ತಿದ್ದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅವರ ಮನೆ

ಯಶೋಧವಿಲಾಸವೇ ಕೇಂದ್ರವಾಗಿತ್ತು. 'ಜ್ವಾಲೆ' ಎಂಬ ಪತ್ರಿಕೆ ಹೊರತಂದರು. ಕಸ್ತೂರಿಬಾಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅರಸಿಕೆರೆಯಲ್ಲಿ ಸ್ಥಾಪನೆಯಾಗಿ ಅದರ ನೇತೃತ್ವ ವಹಿಸಿ ಕಾರ್ಯ ನಿರ್ವಹಿಸಿದರು. ಮಹಿಳೆಯರಿಗಾಗಿ ಅನೇಕ ತರಬೇತಿ ಶಿಬಿರ ಏರ್ಪಡಿಸಿದ್ದರು. ಅರಮನೆ ಮುತ್ತಿಗೆ ಚಳುವಳಿಯಲ್ಲಿಯೂ ಇವರ ಪಾತ್ರ ಸ್ಮರಣೀಯ. ಸ್ವಾತಂತ್ರ್ಯ ನಂತರ ಸಚಿವರಾಗಿ ಮಧ್ಯಪಾನ ನಿರೋಧಕಾಯ್ದೆ ಜಾರಿಗೆ ತರಲಿಲ್ಲವೆಂಬ ಕಾರಣದಿಂದ ರಾಜಿನಾಮೆ ನೀಡಿ ತಮ್ಮ ದೇಶ ನಿಷ್ಠೆಯನ್ನು ಮೆರೆದಿದ್ದಾರೆ. ಚಳುವಳಿಯ ಮುಖಾಂತರ ಜಿಲ್ಲೆಯಾದ್ಯಂತ ಚಿರಪರಿಚಿತವಾಗಿ ಸಚಿವರಾಗಿ, ಸಮಾಜ ನಿಷ್ಠೆ, ಜನ ನಿಷ್ಠೆ ಮೆರೆದಿದ್ದಾರೆ. ಇಂತಹ ಹೋರಾಟಗಾರರ ಪ್ರಾಮಾಣಿಕ ಸೇವೆ ಮರೆಯಲಾಗದು.

**ಗೌರಮ್ಮ ಸರ್ದಾರ್ ವೆಂಕಟರಾಮಯ್ಯ**

ಈಜಿಲ್ಲೆಯಲ್ಲಿ ಪ್ರಭಾವಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯೆಂದೇ ಪ್ರಖ್ಯಾತರಾಗಿರುವ ಗೌರಮ್ಮ, ಸರದಾರ್ ಕೆ.ಎ.ವೆಂಕಟರಾಮಯ್ಯನವರ ಮಡದಿ. ಸತಿಪತಿಗಳಿಬ್ಬರೂ ಕನಕಪುರದವರಾಗಿದ್ದು ಚಳುವಳಿಯಲ್ಲಿ ಸಕ್ರಿಯರಾಗಿ ಭಾಗವಹಿಸಿ ಹರ್ಡೀಕರ್‌ರವರಿಂದ ಪ್ರಭಾವಿತರಾಗಿ ಇಡಿ ತಮ್ಮ ಬದುಕನ್ನೇ ಚಳುವಳಿಗೆ ಸಮರ್ಪಿಸಿಕೊಂಡಿದ್ದರು. ಇವರಿಗೆ ರಾಷ್ಟ್ರಮಟ್ಟದ ನಾಯಕರು ಹತ್ತಿರದವರಾಗಿದ್ದರು. 1931ರಲ್ಲಿ ಮಳೆ ಸಕಾಲಕ್ಕೆ ಬೀಳದಿದ್ದರಿಂದ ಬೆಳೆಗಳೆಲ್ಲ ನಾಶವಾಗಿ, ಶಿರಸಿ, ಸಿದ್ಧಾಪುರ ಮತ್ತು ಹಿರೇಕೆರೂರ ತಾಲ್ಲೂಕುಗಳ ರೈತರು ಸರಕಾರಕ್ಕೆ ಕೊಡಬೇಕಾದ ಕರಗಳನ್ನು ಕೊಡುವ ಪರಿಸ್ಥಿತಿಯಲ್ಲಿರಲಿಲ್ಲ. ಇದೇ ಹೊತ್ತಿಗೆ ಕರನಿರಾಕರಣ ಚಳುವಳಿಯು ಪ್ರಾರಂಭವಾಯಿತು. ಕರಗಳನ್ನು ಒತ್ತಾಯದಿಂದ ಎತ್ತಲು ಪ್ರಾರಂಭ ಮಾಡಿದರು. ಅವರ ದನಕರು, ಅಟ್ಟಿಕೊಂಡು ಪಾತ್ರೆ ಪಗಡೆ ಎತ್ತಿಕೊಂಡು ಹೋಗಿ ಹರಾಜು ಮಾಡುವುದು ಮನೆ ಕಾಲಿ ಮಾಡಿಸುವುದರಲ್ಲಿ ಸರಕಾರ ತೊಡಗಿತು. ವೆಂಕಟರಾಮಯ್ಯನವರ ಪತ್ನಿ ಗೌರಮ್ಮ, ದೊಡ್ಡಮನೆಯ ಮಹಾದೇವಮ್ಮ, ಕಾವೇರಮ್ಮ, ಮಹಿಳೆಯರ ಒಂದು ಸ್ವಯಂ ಸೇವಕ ತಂಡ ರಚಿಸಿ ಅಲ್ಲಿಗೆ ನಡೆದು ಜಪ್ತಿಮಾಡಿದ ಸಾಮಾನು ಕೊಂಡವರ ಮನೆಮುಂದೆ ಸತ್ಯಾಗ್ರಹ ನಡೆಸಿ ಹಿಂದಿರುಗಿಸುವಂತೆ ಕೇಳಿಕೊಂಡರು. ಹೆಜ್ಜೆ ಹಳ್ಳಿಯ ರಾಮಪ್ಪ ಪಟೇಲನ ಮನೆ ಮುಂದೆ ಪ್ರಥಮವಾಗಿ ಅನ್ನಸತ್ಯಾಗ್ರಹ ಹೂಡಿದರು. 1932 ಮಾರ್ಚ್ 29ರಂದು, ಹರಾಜಿನಲ್ಲಿ ಖರೀದಿಸಿದ್ದ ವಸ್ತುಗಳನ್ನು, ಜಾನುವಾರುಗಳನ್ನು, ರಾಮಪ್ಪ ಇವರ ಹೋರಾಟಕ್ಕೆ ಮಣಿದು ಹಿಂತಿರುಗಿಸಿದ. ದಕ್ಷಿಣ ಕನ್ನಡದ ಅಕ್ಕುಂಜೆಯಲ್ಲಿ ಅನ್ನಸತ್ಯಾಗ್ರಹ ಪ್ರಾರಂಭಿಸಿ ಮಹಾದೇವಪ್ಪಗೌಡನು ಖರೀದಿಸಿದ್ದ ದನಕರುಗಳನ್ನು ಹಿಂತಿರುಗಿಸುವಂತೆ ಮಾಡಿದರು. ಮಾವನ ಗುಂಡಿಯಲ್ಲಿನ ಸತ್ಯಾಗ್ರಹ ಮಾಡಿ ಅಲ್ಲಿ ಕಾರಕೊನನು ಖರೀದಿಸಿದ್ದ ದನಕರುಗಳನ್ನು ಹಿಂದಿರುಗಿಸುವಂತೆ ಒತ್ತಾಯಿಸಿ 21 ದಿವಸ

ಉಪವಾಸ ಸತ್ಯಾಗ್ರಹ ಮಾಡಿದರು. 'ನಾವು ಪ್ರಪಂಚಕ್ಕೆ ಬಂದಾನು ಏನು ತಂದೆವು? ಹೋಗುವಾಗ ಏನು ತೆಗೆದುಕೊಂಡು ಹೋಗುವೆವು? ನಮ್ಮ ಆಸ್ತಿಪಾಸ್ತಿ ನಷ್ಟವಾಗುವುದೆಂದು ಏಕೆ ಕೊರಗಬೇಕು, ಮರುಗಬೇಕು, ಭಿಕ್ಷೆಯಿಂದ ಜೀವನ ಮಾಡೋಣ ದುಷ್ಟ ಸರ್ಕಾರಕ್ಕೆ ಕಂದಾಯವೇಕೆ ಕೊಡಬೇಕು?' ಎಂದು ಜನರನ್ನು ಪ್ರೇರೇಪಿಸಿ ಬಂಧನಕ್ಕೊಳಗಾಗಿ, ಕಾರವಾರದ ಜಿಲ್ಲಾ ಜೈಲಿನಲ್ಲಿ ಮತ್ತು ಬೆಳಗಾವಿ ಹಿಂಡಲಗ ಸೆಂಟ್ರಲ್ ಜೈಲಿನಲ್ಲಿ ಆರು ತಿಂಗಳ ಶಿಕ್ಷೆ ಅನುಭವಿಸಿ ಜಿಲ್ಲೆಯ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

**ಟಿ.ಸುನಂದಮ್ಮ**

ದೊಡ್ಡಬಳ್ಳಾಪುರದ ವಕೀಲರಾದ ನರಸಿಂಹ ಅಯ್ಯಂಗಾರರ ಮಡದಿ ಟಿ.ಸುನಂದಮ್ಮ.ಎಲ್.ಎಸ್., ಶಿಕ್ಷಣದ ನಂತರ ಸಮಾಜಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡರು. ಮೊದಲಿಗೆ ಸ್ವಯಂ ಸೇವಕರಾಗಿ ಟಿ.ಸಿದ್ಧಲಿಂಗಯ್ಯನವರ ಮಾರ್ಗದರ್ಶನದಲ್ಲಿ 'ನೇಗರ್ಸ್ ಯೂತ್‌ಲೀಗ್' ಸದಸ್ಯರಾಗಿ, ನ್ಯಾಷನಲ್ ಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗಲೇ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ, ಮಣಿಬೆಹನ್, ಸರದಾರ್ ಪಟೇಲ್ ಮುಂತಾದವರ ಸ್ನೇಹ ಹೊಂದಿದ್ದರು. ಇವರು ಸಿದ್ಧಲಿಂಗಯ್ಯನವರೊಡನೆ, ಕಾಂಗ್ರೆಸ್ ಸೇರಿ, ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ಸಭೆಗಳಲ್ಲಿ ಭಾಗವಹಿಸಿ ಜನರನ್ನು ಚಳುವಳಿಗೆ ಹುರಿದುಂಬಿಸಿದರು. ಸುಮಧುರ ಕಂಠಸಿರಿ ಹೊಂದಿದ್ದ ಇವರು ಸಭೆ ಸಮಾರಂಭಗಳಲ್ಲಿ ಹಾಡಿ ಎಲ್ಲರ ಮನ ಗೆದ್ದು 'ವಂದೇಮಾತರಂ ಸುನಂದಮ್ಮ' ಎಂದೇ ಪ್ರಸಿದ್ಧರಾಗಿದ್ದರು. ಸದಾ ಇವರನ್ನು ಸರ್ಕಾರದ ಸಿ.ಐ.ಡಿ.ಗಳು ಹಿಂಬಾಲಿಸುತ್ತಿದ್ದರು. 11 ಜನವರಿ 1938 ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ ಜಾತ್ರೆ ಸಂದರ್ಭದಲ್ಲಿ ಸಭೆ ಅಧ್ಯಕ್ಷತೆ ವಹಿಸಿ ಕಾಂಗ್ರೆಸ್ ವಿರೋಧಿ ಮೈಸೂರು ರಾಷ್ಟ್ರೀಯ ಪಕ್ಷದವರ ಮಾತು ಕೇಳಬೇಡಿ ಅವರು ಸ್ವಹಿತಾಸಕ್ತಿಗಾಗಿ ಸರ್ಕಾರದ, ದಿವಾನರ ಪರವಾಗಿರುವವರೆಂದು ಮನವಿ ಮಾಡಿದರು. ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಕಾರ್ಯ ನಿರ್ವಹಣಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿ, ಪುರುಷರು 144ನೇ ಸೆಕ್ಷನ್‌ಗೆ ಹೆದರಿ ಧ್ವಜಾರೋಹಣಕ್ಕೆ ಹಿಂದು ಮುಂದು ನೋಡಿದಾಗ ಮಹಿಳೆಯರು ನಾವೇ ಧ್ವಜಾರೋಹನ ಮಾಡುತ್ತೇವೆ. ಏನು ಮಾಡುತ್ತಾರೋ ನೋಡೋಣ, ಅವಕಾಶ ಮಾಡಿ ಎಂದು ಮುನ್ನುಗ್ಗಿದರು. ಶಿವಪುರದ ಅಧಿವೇಶನದಿಂದ ಹಿಂದಿರುಗಿ ಜಿಲ್ಲೆಯಾದ್ಯಂತ ಧ್ವಜಾರೋಹಣ ಕಾರ್ಯಕ್ರಮದಲ್ಲಿ ತೊಡಗಿದರು. ಶಿವಪುರಧ್ವಜ ಸತ್ಯಾಗ್ರಹ ಜಿಲ್ಲೆಯ ಚಳುವಳಿಗೆ ಪ್ರೇರಕವಾಯಿತು. ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ ಚುರುಕುಗೊಂಡು ಅನೇಕರು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿದರು. ಸಿದ್ಧಲಿಂಗಯ್ಯ

ನವರಿಂದ 'ಅಕ್ಕ' ಎಂದು ಕರೆಸಿಕೊಳ್ಳುತ್ತಿದ್ದ ಇವರು ತಮ್ಮ ಹೋರಾಟದ ಮೂಲಕ ದೊಡ್ಡಬಳ್ಳಾಪುರದ ಜನರ ಮನೆಮಗಳಂತೆ ಜನರ ಸ್ಮರಣೆಯಲ್ಲಿ ಉಳಿದಿದ್ದಾರೆ.

**ಕುಂತಳಾ ಸೇತುರಾವ್**

ಬೆಂಗಳೂರಿನ ಸುಬ್ರಹ್ಮಣ್ಯಂ ನಗರದವರಾದ ಕುಂತಳ ಸೇತುರಾವ್ ತಾತ ಹಾಗೂ ಸೋದರಮಾವ ಮುಖ್ಯವಾಗಿ ಗಾಂಧೀಜಿ ತತ್ವಾದರ್ಶಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿ ಪ್ರವೇಶಿಸಿದರು. ಬಾಲ್ಯದಲ್ಲಿಯೇ ತಾತನ ಜೊತೆ ಗಾಂಧೀಜಿ ಸಭೆಯಲ್ಲಿ ಭಾಗವಹಿಸಿ ಹತ್ತಿರದಿಂದ ನೋಡಿ ಮಾತಾಡಿದರು. ಬೆಂಗಳೂರಿನಲ್ಲಿ ಕ್ವಿಟ್ ಇಂಡಿಯಾ ಚಳುವಳಿ, ಪ್ರಬಲವಾಗಿ ನಡೆಯುತ್ತಿದ್ದಾಗ ಮನೆಯವರ ಪ್ರತಿರೋಧ ಲೆಕ್ಕಿಸದೆ ಚಳುವಳಿ ಪ್ರವೇಶಿಸಿದರು ಇವರಿಗೆ ತಾಯಿಯ ಪ್ರೋತ್ಸಾಹ ಇತ್ತು. ಹಾಡುಗಾರ್ತಿಯಾಗಿದ್ದ ಇವರು "ಚರಕ ಚಲಾ ಲೇಂಗೇ ಸ್ವರಾಜ್ಯ ಲೇಂಗೇ" ಮತ್ತು

ನಾವೆಂತ ಮನುಜರ್ರೇಳಿ ಸ್ವಾತಂತ್ರ್ಯವಿಲ್ಲದವರು
ಸ್ವರಾಜ್ಯ ವಿಲ್ಲದವರು ನೀವಾರು ಎನಲು
ಅವರೂ ನಿಮ್ಮ ದಾಸರೆನುವರು

ಎಂಬ ಹಾಡನ್ನು ಸಭೆ ಸಮಾರಂಭಗಳಲ್ಲಿ ರಾಗವಾಗಿ ಹಾಡುತ್ತಿದ್ದರು. ಸುಬ್ಬಮ್ಮ, ಅನ್ನಪೂರ್ಣಮ್ಮನವರೊಡನೆ ನಿಕಟ ಸಂಬಂಧ ಹೊಂದಿದ್ದ ಇವರು ಚಳುವಳಿಗಾಗಿ ಟಿ.ಎಸ್.ಪೊನ್ನಮ್ಮಾಳ್, ಕೊಡಗಿನ ಮೀನಾಕ್ಷಿ, ರಾಮನಾಥ, ವೇಣುಗೋಪಾಲ, ಕೋಮಲ, ಮಂಗಳ, ಜಿ.ವೆಂಕಟಲಕ್ಷ್ಮಮ್ಮ, ಶಾಂತ ಹಂಸಮಾನೆ, ಮುಂತಾದವರ ಒಂದು ತಂಡವನ್ನು ಕಟ್ಟಿಕೊಂಡಿದ್ದರು. ಇವರೆಲ್ಲ ಸಭೆ, ಪಿಕೆಟಿಂಗ್, ಬಹಿಷ್ಕೃತ ಪತ್ರಿಕೆಗಳ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ ಇವರಿಗೆ ಮಾರ್ಗದರ್ಶಕರಾಗಿದ್ದರು. ಒಂದೆಡೆಯಿಂದ ಇನ್ನೊಂದೆಡೆಗೆ ವಿಚಾರಗಳನ್ನು ಮುಟ್ಟಿಸುವುದು, ಜೈಲಿನಲ್ಲಿದ್ದವರನ್ನು ಭೇಟಿಮಾಡುವುದು ಇವರ ಕೆಲಸವಾಗಿತ್ತು. ಕಾರ್ಮಿಕರ ಮುಷ್ಕರ ಸಂದರ್ಭದಲ್ಲಿ ಕಾರ್ಮಿಕ ಸಮ್ಸಾರಗಳಿಗೆ ಸಂಗ್ರಹಿಸಿದ ದವಸ ಧಾನ್ಯ ಹಂಚುತ್ತಿದ್ದರು. 1943ರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸ್ಥಾಪನೆಯಾದಾಗ, ಮಹಿಳಾಶಾಖೆಯ ಕಾರ್ಯದರ್ಶಿಯಾಗಿ, ಐ.ಎನ್.ಎ, ಸದಸ್ಯಳಾಗಿ ಸೇವೆ ಸಲ್ಲಿಸಿದರು. 1947ರ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸಿ ಕೊನೆಗೆ ಮಂತ್ರಿ ಮಹೋದಯರಿಗೆ ಅರಳೆಪೇಟೆ ಕಾಂಗ್ರೆಸ್ ಸಮಾವೇಶದಲ್ಲಿ ಹಣೆಗೆ ತಿಲಕ ಇಟ್ಟು ಬೀಳ್ಕೊಟ್ಟರು.

**ದೊಡ್ಡಬಳ್ಳಾಪುರದ ಜಯಮ್ಮ**

ಜಯಮ್ಮನವರಿಗೆ ಚಳುವಳಿ ಪ್ರವೇಶಿಸಲು ಪತಿಯೇ ಪ್ರೇರೇಪಣೆ ಸದಾ ಮನೆ ಮಕ್ಕಳನ್ನು ತೊರೆದು ಚಳುವಳಿಗಾಗಿ ಊರೂರು ಅಲೆಯುತ್ತಿದ್ದ ಗಂಡನನ್ನು ಪ್ರಾರಂಭದಲ್ಲಿ ಮೂದಲಿಸುತ್ತಿದ್ದ ಜಯಮ್ಮ ನಂತರ ನಾಯಕರ ಭಾಷಣ, ಜನರಸ್ಥಿತಿ, ಸರ್ಕಾರದ ಧಮನಕಾರಿ ನೀತಿ ಈ ಎಲ್ಲವುಗಳ್ಳೆಂದ ಮಮ್ಮಲ ಮರುಗಿ ಪತಿಯೊಡನೆ ಚಳುವಳಿಗೆ ಕೈಜೋಡಿಸಿದರು. ತನ್ನ ಪತಿ ಬಂಧನಕ್ಕೊಳಗಾದಾಗ ಅದನ್ನು ಖಂಡಿಸಿ ದೊಡ್ಡಬಳ್ಳಾಪುರದಾದ್ಯಂತ ಸಭೆ ಏರ್ಪಡಿಸಿ ಸರ್ಕಾರದ ಕ್ರಮ ಟೀಕಿಸಿದರು. 09 ಮೇ 1938 ಚಿಕ್ಕ ಹೆಜ್ಜಾಜಿ, ಸಭೆ ಇವರ ಅಧ್ಯಕ್ಷತೆಯಲ್ಲಿಯೇ ನಡೆಯಿತು. ಮುಗುವಾಳಪ್ಪ, ರುಮಾಲೆ ಚನ್ನಬಸವಯ್ಯ ಭಾಗವಹಿಸಿದ್ದರು. ವಿದೇಶಿವಸ್ತ್ರ ಬಹಿಷ್ಕರಿಸಿ ಬೆಂಕಿಯಲ್ಲಿ ಸುಟ್ಟರು. ಟಿ.ಸುನಂದಮ್ಮನವರೊಡನೆ ದೊಡ್ಡಬಳ್ಳಾಪುರದ ಎಲ್ಲಾ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು.

**ಬಿ.ಕಾಮಾಕ್ಷಮ್ಮ**

ಬೆಂಗಳೂರಿನ ಮಲ್ಲೇಶ್ವರಂ ನಿವಾಸಿಯಾದ ಕಾಮಾಕ್ಷಮ್ಮ ಬಾಲವಿಧವೆಯಾಗಿದ್ದರು. ಗಾಂಧೀಜಿಯವರ ಪ್ರಭಾವದಿಂದಾಗಿ ರಾಷ್ಟ್ರೀಯ ಚಳುವಳಿ ಪ್ರವೇಶಿಸಿದರು. ಉಮಾಬಾಯಿ ಕುಂದಾಪುರ ರವರ ಸಖ್ಯ ಹೊಂದಿದ್ದ ಇವರು ರಾಷ್ಟ್ರನಾಯಕರೆಲ್ಲ ಹಿಂದಿ ಭಾಷೆಯಲ್ಲಿ ಮಾತನಾಡುತ್ತಿದ್ದರಿಂದ ಅವರ ಒಡನಾಟಗಳಿಸಲು ಹಿಂದಿ ಕಲಿಯಬೇಕೆಂದು ತೀರ್ಮಾನಿಸಿ, ಮಲ್ಲೇಶ್ವರಂ ಸ್ತ್ರೀ ಸಮಾಜದಲ್ಲಿನ ಹಿಂದಿ ತರಗತಿಗಳಿಗೆ ಹಾಜರಾಗಿ ಹಿಂದಿ ಕಲಿತರು. ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭೆ ಅಡಿಯಲ್ಲಿ ಗಾಂಧೀಜಿಯವರ ಕೈಯಿಂದ ರಾಷ್ಟ್ರಭಾಷಾ ಪ್ರಮಾಣ ಪತ್ರ ಪಡೆದರು. ನಂತರ ಖಾದಿ ಧರಿಸಿ ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿ ಮಲ್ಲೇಶ್ವರಂ, ಶೇಷಾದ್ರಿಪುರಂ, ಶ್ರೀರಾಮಪುರ, ನಾಗಪ್ಪಬ್ಲಾಕ್‌ನಲ್ಲಿ ಹಿಂದಿ ತರಗತಿ ಆರಂಭಿಸಿ ಕಲಿಸಲು ಮುಂದಾದರು. 1940ರ ಒಂದು ನೂರು ಮ್ ಅಂದಿಗೆ ಹಿಂದಿ ಕಲಿಸಿ ಪ್ರಮಾಣ ಪತ್ರ ವಿತರಿಸುವ ಸಮಾರಂಭ ನಡೆಸಿದರು. 1942ರ ಕ್ವಿಟ್‌ಇಂಡಿಯಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಕಾಮಾಕ್ಷಮ್ಮನವರು ಮುಂಬಯಿ ಬಳಿ ಬೋರಿವಲಿಯಲ್ಲಿ ನಡೆದ ಕಸ್ತೂರಬಾ ಶಿಕ್ಷಣ ಶಿಬಿರದಲ್ಲಿ ಬಳ್ಳಾರಿ ಸಿದ್ಧಮ್ಮ, ತುಕಾಬಾಯಿ, ತಾಯಮ್ಮ ವೀರಣ್ಣ ಗೌಡ, ಜೊತೆ ಭಾಗವಹಿಸಿದ್ದರು.

**ಜೆ.ಸಿ.ಭಾಗೀರಥಮ್ಮ**

1922ರಲ್ಲಿ ಕರಿಮಣಿ ಸಿದ್ಧಲಿಂಗಪ್ಪ, ಸಿದ್ಧನಂಜಮ್ಮನವರ 6ನೇ ಮಗಳಾಗಿ ತುಮಕೂರಿನಲ್ಲಿ ಜನಿಸಿದ ಇವರು ಮದುವೆಗೆ ಮುನ್ನವೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ

ನಿಬಂಧನೆಯೊಡನೆ ಭಾಗೀರಥಮ್ಮ ಬೆಂಗಳೂರಿನ ಜಿ.ಆರ್.ಚಂಗಲಾರಾಧ್ಯ ಅವರೊಂದಿಗೆ ವಿವಾಹವಾದರು. ವಿವಾಹಕ್ಕೆ ಮೊದಲೇ ಸ್ವಾತಂತ್ರ್ಯ ಚಳುವಳಿಯಾಗಿ ಎಲ್ಲಾ ರೀತಿ ತ್ಯಾಗಕ್ಕೆ ಸಿದ್ಧಳಾಗಿರಬೇಕೆಂಬ ವಚನಕ್ಕೆ ಬದ್ಧರಾಗಿ ಬದುಕು ನಡೆಸಿದರು. ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸಿದ ಇವರು 5ನೇ ಸೆಪ್ಟೆಂಬರ್ 1942ರಲ್ಲಿ ಬಿನ್ನಿಮಿಲ್ ಕಾರ್ಮಿಕರ ಸಭೆಯಲ್ಲಿ ಪತಿಯೊಡನೆ ಭಾಗವಹಿಸಿ ಬಂಧಿಸಲ್ಪಟ್ಟರು. ಪ್ರತಿಭಟನೆಗೆ ಇವರ ಜೊತೆ ದಂಡುಪ್ರದೇಶದ ರಾಮಕ್ರುಷ್ಣಪ್ಪನವರ ಪತ್ನಿ ಪಾಪಮ್ಮ, ಮುನಿಸ್ವಾಮಿಗೌಂಡರ್ ಪತ್ನಿ ದೇವಯಾನಿಯಮ್ಮ, ಚಂಗಾಲ್ವರಾಯಮೊದಲಿಯಾರ್ ಪತ್ನಿ ನಾಗಭೂಷಣಮ್ಮ, ನರಸಪ್ಪನವರ ಪತ್ನಿ ಲಕ್ಷ್ಮೀದೇವಿಯಮ್ಮ, ಟಿ.ಸುಬ್ರಹ್ಮಣ್ಯಂ ರವರ ಪತ್ನಿ ಸುಶೀಲಮ್ಮ, ಇವರೆಲ್ಲ ಸೇರಿ ಪ್ರತಿಭಟನೆ ಮಾಡೀ 6 ತಿಂಗಳ ಕಾಲ ಶಿಕ್ಷೆ ಅನುಭವಿಸಿದ್ದರು.

**ಮಹದೇವಿ**

ಬೆಂಗಳೂರಿನ ನಿವಾಸಿ ಹಾಗೂ ದಿವಂಗತ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯವರ ಸಹೋದರಿಯಾದ ಇವರು ದೇಶದಾದ್ಯಂತ ನಾಯಕರೊಡನೆ ಕಾಲು ನಡಿಗೆಯಲ್ಲಿ ಸುತ್ತಿ ಸ್ತ್ರೀಯರಲ್ಲೂ ಪುರಷರಲ್ಲೂ ಸ್ವಾತಂತ್ರಯ್ ಜ್ವಾಲೆ ಮೂಡಿಸಿದವರು 'ಮಾತೆ ಮಹಾದೇವಿ' ಎಂದೇ ಪ್ರಸಿದ್ಧರಾಗಿರುವ ಇವರು, ಹತ್ತು ವರ್ಷದ ಹುಡುಗಿಯಾಗಿದ್ದಾಗ ಮದುವೆಯಾಗಿ ನಂತರ ಗಂಡನ ಮರಣದಿಂದ ಬಾಲ ವಿಧವೆಯಾಗಿದರು. ಹನ್ನೆರಡನೇ ವರ್ಷದಲ್ಲಿ ಬಾಲ್ಯವಿವಾಹ ನಿಷೇಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಜನರನ್ನು ಹುರಿದುಂಬಿಸಿ ಸರದಾರ್ ವೆಂಕಟರಾಮಯ್ಯನವಾ ಮಡದಿ ಗೌರಮ್ಮನವರೊಡನೆ ಚಳುವಳಿಯಲ್ಲಿ ಭಾಗವಹಿಸಿ, ಹ್ಹಿಂಡಲಗ ಹಾಗೂ ರತ್ನಗಿರಿ ಜೈಲಿನಲ್ಲಿ ಸೆರವಾಸ ಅನುಭವಿಸಿದರು. 1934ರಲ್ಲಿ ಗಾಂಧೀಜಿಯವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ತನ್ನ ಪರಿಚಯ ಮಾಡಿಕೊಂಡು ಅವರ ಅನುಯಾಯಿಯಾದರು. ತಮ್ಮ 18 ದಿವಸಗಲ ಸೆರೆವಾಸವನ್ನು ಗಾಂಧೀಜಿಯವರೊಡನೆ ಹಂಚಿಕೊಂಡರು. ಗಾಂಧೀಜಿ ಆಹ್ವಾನದ ಮೇರೆಗೆ ಡಾ.ಹರ್ಡಿಕರ್ ಜೊತೆ ವಾರ್ದಕ್ಕೆ ಹೋಗಿ ಅಲ್ಲಿ ಸೇವಾ ಕಾರ್ಯಕೈಗೊಂಡರು. ಆಚಾರ್ಯ ವಿನೋಭಾಬಾವೆಯವರೊಡನೆ ಪಾದಯಾತ್ರೆಯಲ್ಲಿ ಭಾಗವಹಿಸಿ, ನಲವತ್ತೆಂಟು ವರ್ಷಗಳು ಅವರ ಜೊತೆಗಿದ್ದು ಸೇವೆ ಮಾಡಿದರು. ಈ ಸೇವೆಯ ಫಲವೇ ಬೆಂಗಳೂರಿನ ವಿಶ್ವನೀಡಂ ಆಶ್ರಮದ ಒಡೆತನವನ್ನು ವಿನೋಬಾಜಿ ಮಹಾದೇವಿಗೆ ಒಪ್ಪಿಸಲು ಕಾರಣವಾಯಿತು. ದಕ್ಷಿಣ ಭಾರತದ ಕಾರ್ಯಕಲಾಪಗಳಿಗೆ ಪರಮಸಾತ್ವಿಕರೂ,

ಬ್ರಹ್ಮಚಾರಿಯೂ ಆಗಿದ್ದ ವಲ್ಲಭಸ್ವಾಮಿಯನ್ನು, ನಿಯೋಜಿಸಿದ್ದರಿಂದ ಅವರೊಡನೆ ಇದ್ದು ವಿನೋಭಾಬಾವೆ ನಿಕಟವರ್ತಿಗಳಾಗಿ, ವಲ್ಲಭನಿಕೇತನ ಆಶ್ರಮದಲ್ಲಿ ಸೇವಾಕೈಂಕರ್ಯ ಕೈಗೊಂಡರು.

ಈ ಎಲ್ಲಾ ಮಹನೀಯರ ಅವಿರತ ಶ್ರಮದಿಂದ ಸ್ವಾತಂತ್ರ್ಯ ಪ್ರಾಪ್ತಿಯಾಯಿತು. ಪತಿ ಎಂಬ ಸಂಬಂಧ ಕಡೆಗಣಿಸಿ, ಕಾಂಗ್ರೆಸಿಗೆ ಮತಹಕುವುದರ ಮೂಲಕ ಕಾಂಗ್ರೆಸ್ ನಿಷ್ಠೆ ಮೆರೆದ ಯಶೋಧರ ದಾಸಪ್ಪ, ಪತಿಯ ಬಂಧನ್ ಟೀಕಿಸಿ ಚಳುವಳಿಗೆ ತಾನು ಧುಮುಕಿದ ಜಯಮ್ಮ, ವಿಧವಾ ವಿವಾಹವಾಗುವುದರ ಮೂಲಕ ಸಾಮಾಜಿಕ ಕಟ್ಟಳೆ ಧಿಕ್ಕರಿಸಿದ ತಾಯಮ್ಮ ಹೆಚ್.ಕೆ.ವೀರಣ್ಣಗೌಡ, ಸಾಮಾಜಿಕ ಸೇವೆಗಾಗಿ ಗಾಂಧಿ ತತ್ವ ಅನುಸರಿಸಿ ಬ್ರಹ್ಮಚಾರಿಯಾಗಿ ಜೀವನ ನಡೆಸಿದ ಮಹಾದೇವಿ ಮುಂತಾದ್ ಐವರೆಲ್ಲರ ಬದುಕು ನಮಗೆ ಇಂದಿನ ಮಹಿಳೆಯರಿಗೆ ಮಾಗದರ್ಶಕ, ಆದರೆ ನಾವಿಂದು ಇವರೆಲ್ಲರ ಆದರ್ಶ ಮರೆತು ಬದುಕುತ್ತಿರುವುದು ಬೃಹತ್ ವಿಪರ್ಯಾಸವೇ ಸರಿ.

**ಅಡಿ ಟಿಪ್ಪಣಿಗಳು:**

1. ಡಾ.ಸಿದ್ಧಲಿಮ್ಗಮ್ಮ, ಯಶೋಧರಮ್ಮ ದಾಸಪ್ಪ, (ಗಾಂಧೀ ಅಧ್ಯಯನ ಮಾಲೆ) ನಮ್ಮ ಸುತ್ತಣ ಗಾಂಧೀಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಪುಟ–6
2. ಡಾ.ಸರೋಜಿನಿ ಶಿಂತ್ರಿ, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ಮಹಿಳೆಯರ ಪಾತ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಡಿಸೆಂಬರ್ 1986, ಪುಟ–40
3. ಡಾ.ಸುಧಾ ಸೀತಾರಾಮನ್, ಸಮಾನತೆಯಿಂದ ಭಿನ್ನತೆಯೆಡೆಗೆ–ಗಾಂಧೀ ಅಧ್ಯಯನ ಮಾಲೆ, (ಭಾರತದಲ್ಲಿ ಮಹಿಳಾ ಚಳುವಳಿ) ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ–2007, ಪುಟ–9
4. ಡಾ.ರಾಜಶೇಖರ್ ಹೆಚ್.ಬಿ. (ಸಂ). ನೇಗಿಲಭಾಗ್ಯ, ವಾರ ಪತ್ರಿಕೆ 05 ಫೆಬ್ರವರಿ 2010, ಪುಟ 3
5. ಡಾ.ಸರೋಜಿನ ಶಿಂತ್ರಿ, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಡಿಸೆಂಬರ್ 1986, ಪುಟ 46,47